ಪಾಠಶಾಲೆಗಳನ್ನು ನಡೆಸುತ್ತಾರೆ ಆ ಪಾಠಶಾಲೆಗಳನ್ನು ನೋಡಿಕೊಳ್ಳುವುದಕ್ಕೆ ವಿದ್ಯಾ ಇಲಾಖೆಯ ಇನ್ಸ್‌ಪೆಕ್ಟರನ್ನು ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಜೆ. ಬಿ. ಶಂಕರರಾವ್.—ಅದು ಔಪಚಾರಿಕ ಶಿಕ್ಷಣ, ಇದು ಅನೌಪಚಾರಿಕ ಶಿಕ್ಷಣ, ಇದು ಒಂದಕ್ಕೊಂದಕ್ಕೆ ಸರಿಹೋಗುವುದಿಲ್ಲ. ಇದಕ್ಕೆ ಎಲ್ಲಿ ಶಿಕ್ಷಕರು ಮುಂದೆ ಬರುತ್ತಾರೆ ಆಲ್ಲಿ ಅವರಿಗೆ ಕೆಲಸವನ್ನು ವಹಿಸಬಹುದು. ಪ್ರತಿಯೊಬ್ಬರೂ ಕೆಲಸ ಮಾಡುತ್ತೇವೆಂದು ಮುಂದೆ ಬರುವುದಕ್ಕೆ ಸಾಧ್ಯವಿಲ್ಲ, ಪ್ರತಿಯೊಬ್ಬರನ್ನೂ ಬಳಸುವಹಾಗಿಲ್ಲ. ನಾವು ಇದಕ್ಕೆ ಪ್ರತ್ಯೇಕವಾಗಿ ಶಿಕ್ಷಕರನ್ನು ನೇಮಿಸಿಕೊಂಡು ಆ ಕೆಲಸವನ್ನು ಮುಂದುವರಿಸುತ್ತಾ ಇದ್ದೇವೆ. ಪ್ರತಿಯೊಂದು ಗ್ರಾಮದಲ್ಲಿರತಕ್ಕ ಶಿಕ್ಷಕರನ್ನು, ಸ್ಥಳೀಯರನ್ನು ನೇಮಿಸಿ ಕೆಲಸ ಮಾಡುವುದಾದರೆ ೫೦ ರೂಪಾಯಿ ಸಂಬಳಕ್ಕೆ ಬರುತ್ತಾರೆಂದು ನನಗೆ ಅನ್ನಿಸುವುದಿಲ್ಲ, ಬಂದರೆ ಹಳ್ಳಿಗಳಲ್ಲಿ ತೆಗೆದುಕೊಳ್ಳುತ್ತೇವೆ. ಅವರಿಗೆ ಟ್ರೈನಿಂಗ್ ಬೇಕಾಗುತ್ತದೆ, ಸಾಕ್ಷರತೆ ಹೆಚ್ಚಿಲೆ ಬೇಕಾಗುತ್ತದೆ, ಆಸಕ್ತಿ ಬೇಕಾಗುತ್ತದೆ, ಇಷ್ಟೆಲ್ಲಾ ಇದ್ದು ಕೆಲಸ ಮಾಡಿಕೊಂಡು ಹೋಗುವಂತ ಆಸಕ್ತಿ ಬಂದಿದ್ದಾದರೆ ಬಹುಶಃ ಇದು ಪ್ರಗತಿ ಹೊಂದುತ್ತಿತ್ತು, ಇದು ಹಾಗೆ ಇಲ್ಲ. ಆದುರಿಂದ ತಾವು ವಿದ್ಯಾವಂತರಿದ್ದೀರಿ ತಾವು ವಹಿಸಿಕೊಳ್ಳಬೇಕು, ತಮಗೆ ಸಹಾಯ ಮಾಡುತ್ತೇವೆ, ತಾವು ಮಾಡಿರಿ.

ಶ್ರೀ ವಿ. ವಿ. ಪತ್ತಾರ್.—ಜಮಖಂಡಿಯಲ್ಲಿ ಬಹುಶಃ ೧೦೦ ಸೆಂಟರ್‌ಗಳನ್ನು ತೆರೆದಿದ್ದೀರಿ, ಎರಡು ವರ್ಷಗಳಿಂದ ಅವು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ, ಅದಕ್ಕಾಗಿ ಸರ್ಕಾರವನ್ನು ಅಭಿನಂದಿಸುತ್ತೇನೆ. ಜಮಖಂಡಿ ತಾಲ್ಲೂಕು ಮೂರೂವರೆ ಅಥವಾ ನಾಲ್ಕು ಲಕ್ಷ ಜನರ ವಸತಿ ಇದ್ದಂಥ ಪ್ರದೇಶವಿದೆ. ಹಳ್ಳಿಗಳಲ್ಲಿ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಈ ವಯಸ್ಕರ ಶಿಕ್ಷಣ ಯೋಜನೆಯಿಲ್ಲ. ಆದ್ದರಿಂದ ಇನ್ನೊಂದು ೧೦೦ ಹೆಚ್ಚು ಸೆಂಟರ್ಸ್ ಬೇಕಾಗುತ್ತದೆ ಎಂದು ಈಗಾಗಲೇ ಹೇಳಿದ್ದೇನೆ. ಆದ್ದರಿಂದ ಸ್ವಲ್ಪ ಹೆಚ್ಚು ಸೆಂಟರ್ಸನ್ನು ಈ ಸಾಲಿನಲ್ಲಿ ಕೊಡುತ್ತೀರಾ ?

ಶ್ರೀ ಜೆ. ಬಿ. ಶಂಕರರಾವ್.—ಜಮಖಂಡಿ ತಾಲ್ಲೂಕಿನಲ್ಲಿ ಈ ಕೇಂದ್ರಗಳು ತೃಪ್ತಿಕರವಾಗಿ ನಡೆದಿವೆ ಎಂದು ಹೇಳಿದ್ದಾರೆ, ಅದಕ್ಕಾಗಿ ಮಾನ್ಯ ಸದಸ್ಯರನ್ನು ಅಭಿನಂದಿಸಬೇಕು. ಆಲ್ಲಿ ಈಗಾಗಲೇ ೧೦೦ ಕೇಂದ್ರಗಳನ್ನು ಕೊಟ್ಟಿದ್ದೇವೆ. ನಾನು ಆಗಲೇ ಹೇಳಿದಹಾಗೆ, ಈ ಕಾರ್ಯಕ್ರಮವನ್ನು ವರ್ಷೇ ವರ್ಷೇ ನಮಗೆ ಸಿಗತಕ್ಕ ಹಣದ ಆಧಾರದ ಮೇಲೆ ಮುಂದುವರಿಸಿಕೊಂಡು ಹೋಗಬೇಕು. ಇನ್ನೊಂದು ೧೦೦ ಕೇಂದ್ರಗಳನ್ನು ನಾವು ಕೋಡಲಿಕ್ಕೆ ಆಗುವುದಿಲ್ಲ, ೫೦ ಕೇಂದ್ರಗಳನ್ನು ಒದಗಿಸಬೇಕು ಎನ್ನತಕ್ಕ ವಿಚಾರ ಸರ್ಕಾರಕ್ಕಿದೆ.

Compulsory Education in the State

821 SRI K. PRABHAKAR (Nelamangala)—Will the Minister of State for Primary and Secondary Education be pleased to state.—

(a) the number of children comes within the purview of Compulsory Education System in the State ; out of them the number of boys and girls ;

(b) out of them the percentage of students availed the benefit so far under this scheme of Education ?

SMT. NAGAMMA C. KESHAVAMURHY.—Minister of State for Primary and Secondary Education.

(a) 32,17,847 (during 1981-82) Male Children-17,64,920 Female Children—14,52,927.

(b) 94 per cent of students.

ಶ್ರೀ ಕೆ. ಪ್ರಭಾಕರ್.—ಉತ್ತರದಲ್ಲಿ ಗಂಡು ಮಕ್ಕಳ ಸಂಖ್ಯೆ ಮತ್ತು ಹೆಣ್ಣು ಮಕ್ಕಳ ಸಂಖ್ಯೆಯನ್ನು ಕೊಟ್ಟಿದ್ದಾರೆ, ೨೯ಕಡ ೯೪ ಮಂದಿಗೆ ಈ ವಿದ್ಯಾಭ್ಯಾಸ ಯೋಜನೆಯಂತೆ ಅನುಕೂಲ ದೊರೆತಿದೆ

ಎಂದು ಹೇಳಿದ್ದಾರೆ. ಇದರಲ್ಲಿ ಹರಿಜನ-ಗಿರಿಜನರ ಮಕ್ಕಳು ಎಷ್ಟು ಇದ್ದಾರೆ, ಅವರು ಶೇಕಡಾವಾರು ಪ್ರತಿ ಕಾಲಮ್ಮಿನಲ್ಲೂ ಎಷ್ಟೆಷ್ಟು ಇದ್ದಾರೆ ಎನ್ನುವುದನ್ನು ದಯವಿಟ್ಟು ಹೇಳುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ನನ್ನ ಹತ್ತಿರ ಆ ಅಂಕಿಅಂಶ ಇರುವುದಿಲ್ಲ. ಕೇವಲ ಹುಡುಗರು ಎಷ್ಟು ಜನ ಇದ್ದಾರೆ ಹುಡುಗಿಯರು ಎಷ್ಟು ಇದ್ದಾರೆ ಎಂದು ಇದೆ. ಆದರಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಮಕ್ಕಳು ಎಷ್ಟಿದ್ದಾರೆ ಎಂಬ ಅಂಕಿಅಂಶ ಇಲ್ಲ, ನಾನು ತರಿಸಿ ಕೊಡುತ್ತೇನೆ.

ಶ್ರೀ ಕೆ. ಪ್ರಭಾಕರ್ —ಅಂಕಿ ಅಂಶ ಇಲ್ಲ ಅಂದರೆ ಹೇಗೆ, ಅವರ ಪ್ರಗತಿ ವ ಏಕ್ಯವಾಗಿ ಆಗಬೇಕಾಗಿತ್ತು, ಏನಾಯಿತು, ಏನಿಲ್ಲ ಎನ್ನುವುದು ಇದರಿಂದ ಗೊತ್ತಾಗುವುದಿಲ್ಲ ಅಲ್ಲವೇ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಪರಿಶಿಷ್ಟ ಜನಾಂಗದವರ ಮಕ್ಕಳಿಗಾಗಿ ನಾವು ಸಾಕಷ್ಟು ಇನ್‌ಸೆಂಟೀವ್ಸ್‌ನ್ನು ಈಗಾಗಲೇ ಕೊಡುತ್ತಾ ಇದ್ದೇವೆ.

ಅಧ್ಯಕ್ಷರು.—ಕಂಪಲ್ಸರಿ ಎಜುಕೇಷನ್‌ನಲ್ಲಿ ಈ ಮಕ್ಕಳ ಸಂಖ್ಯೆ ದಾಮಾಷಾ ಇಲ್ಲ ಎಂದು ಹೇಳುತ್ತಿದ್ದೀರಿ ಇದರಿಂದ ಎಷ್ಟು ಪ್ರಗತಿಯಾಗಿದೆ ಎನ್ನುವುದು ಗೊತ್ತಾಗುವುದಿಲ್ಲ ಎಂದು ಕೇಳುತ್ತಿದ್ದಾರೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಾನ್ಯ ಸದಸ್ಯರು ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ಸ್ ಮಕ್ಕಳು ಎಷ್ಟು ಇದ್ದಾರೆಂದು ಕೇಳುತ್ತಾ ಇದ್ದಾರೆ.

MR. SPEAKER.—What the hon. Member says is since the percentage has not been supplied to the House it is not possible to know the progress.

ಶ್ರೀ ಡಿ. ಟಿ. ಮಾಯಣ್ಣ.—ಈ ಪ್ರಶ್ನೆಯನ್ನು ವಿತ್‌ಹೋಲ್ಡ್ ಮಾಡಿದರೆ ಅನುಕೂಲ ಆಗುತ್ತದೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಈಗ ಆ ಒಂದು ಅಂಕಿಅಂಶ ನನ್ನ ಹತ್ತಿರ ಇಲ್ಲ, ನಾನು ತರಿಸಿಕೊಡುತ್ತೇನೆ.

ಶ್ರೀ ಕೆ. ರಾಮಭಟ್. —ಈಗ ಒಂದನೇ ಕ್ಲಾಸನ್ನು ಶುರುಮಾಡಿದಾಗ ಸಂಖ್ಯೆ ಎಷ್ಟಿದೆ ಎಂದು ತಾವು ಕೊಟ್ಟಹಾಗೆ ಕಾಣುತ್ತದೆ. ಆದರೆ ಹೀನೇ ಕ್ಲಾಸಿನ ತನಕ ಅಂದರೆ ಆ ಸಮಯದಲ್ಲಿ ಸಂಖ್ಯೆ ಎಷ್ಟಿರುತ್ತದೆ ಎಂದು ತಿಳಿಸುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ನಾನು ತಿಳಿಸಿದ ಹಾಗೆ ಮೊದಲನೇ ವರ್ಷ ೯೪ ಪರ್ಸೆಂಟ್ ಎನ್‌ರೋಲ್‌ಮೆಂಟ್ ಆಗುತ್ತಾರೆ. ನಾಲ್ಕು, ಐದನೇ ತರಗತಿಗೆ ಬರುವವರೆಗೆ ಮಾತ್ರ ೪೦-೫೦ ಪರ್ಸೆಂಟ್ ಡ್ರಾಪ್ ಔಟ್ಸ್ ಆಗುತ್ತಾರೆ. ಇದನ್ನು ಕಂಟ್ರೋಲ್ ಮಾಡಬೇಕು ಎಂದು ನಾನಾ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಹೀಗಾಗಿ ಈಗ ಎಸ್.ಸಿ. ಮತ್ತು ಎಸ್.ಟಿ. ಮಕ್ಕಳಿಗಾಗಿ ನಾವು ಕೆಲವಾರು ಕಾರ್ಯಕ್ರಮಗಳನ್ನು ಪಾಸಿಕೊಂಡು ಇನ್‌ಸೆಂಟೀವ್ಸ್ ಅವರಿಗೆ ಕೊಡುತ್ತಾ ಇದ್ದೇವೆ. ಅಟೆಂಡೆನ್ಸ್ ಸ್ಕಾಲರ್‌ಶಿಪ್ಸ್ ಫಾರ್ ಗರ್ಲ್ಸ್ ಕೊಡುತ್ತಾ ಇದ್ದೇವೆ. ಫ್ರೀ ಸಪ್ಲೈ ಆಫ್ ಟೆಕ್ಸ್‌ಟ್ ಬುಕ್ಸ್ ಕೊಡುತ್ತಾ ಇದ್ದೇವೆ ಮತ್ತು ಯೂನಿಫಾರಮ್ಸ್ ಕೊಡುತ್ತಾ ಇದ್ದೇವೆ, ಪ್ರಿಪ್ರೈಮರಿ ಸೆಂಟರ್ಸನ್ನು ನಾವು ಆದಷ್ಟು ಹೆಚ್ಚು ಹೆಚ್ಚು ಪ್ರತಿವರ್ಷ ಸ್ಯಾಂಕ್ಷನ್ ಮಾಡುತ್ತಾ ಇದ್ದೇವೆ. ಏಕೆಂದರೆ, ತಮ್ಮ ತಂಗಿಯರನ್ನು ಮತ್ತು ತಮ್ಮಂದಿರನ್ನು ನೋಡಿಕೊಳ್ಳುವುದಕ್ಕೆ ಎಷ್ಟೋ ಮಕ್ಕಳನ್ನು ಶಾಲೆ ಬಿಡಿಸಿ ಮನೆಯಲ್ಲಿ ಕೂಡಿಸುತ್ತಾರೆ. ಆದರಲ್ಲೂ ಹೆಚ್ಚಿಗೆ ಹೆಣ್ಣುಮಕ್ಕಳು. ಆದ್ದರಿಂದ ಪ್ರಿ ಪ್ರೈಮರಿ ಸೆಂಟರ್ಸನ್ನು ಪ್ರಾರಂಭ ಮಾಡುವುದಾದರೆ ಡ್ರಾಪ್ ಔಟ್ಸ್ ಆದಷ್ಟು ಕಡಿಮೆ ಆಗುತ್ತದೆ ಎನ್ನುವ ದೃಷ್ಟಿಯಿಂದ ನಮ್ಮ ರಾಜ್ಯದಲ್ಲಿ ೧೩೫೦ ಪ್ರಿ ಪ್ರೈಮರಿ ಸೆಂಟರ್ಸನ್ನು ನಡೆಸುತ್ತಾ ಇದ್ದೇವೆ. ಪ್ರತಿ ವರ್ಷ ೧೬೬ ಪ್ರಿ ಪ್ರೈಮರಿ ಸೆಂಟರ್ಸನ್ನು ಶುರುಮಾಡಿದ್ದೇವೆ. ಇನ್‌ಸೆಂಟೀವ್ಸ್ ಬಗ್ಗೆ ಹೇಳುವುದಾದರೆ, ಹಿಂದಿನವರ್ಷ ಕೇವಲ ೧೯ ಲಕ್ಷ ರೂಪಾಯಿಗಳನ್ನು ಅಲಾಟ್‌ಮೆಂಟ್ ಮಾಡಿದ್ದೆವು. ಈ ವರ್ಷ ಆದನ್ನು ಡಬಲ್ ಮಾಡಿದ್ದೇವೆ. ಹೆಚ್ಚು ಮಕ್ಕಳಿಗೆ ಇನ್‌ಸೆಂಟೀವ್ಸ್ ಕೊಡುವ ದೃಷ್ಟಿಯಿಂದ ಈ ವರ್ಷ ಡಬಲ್ ಮಾಡಿದ್ದೇವೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುತ್ತೇನೆ. ಶೇಕಡ ೯೪ ಮಂದಿಗೆ ಕಡ್ಡಾಯ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತಾ ಇದ್ದಾರೆ. ಬಹುತೇಕ ಗ್ರಾಮಾಂತರ ಪ್ರದೇಶಗಳಲ್ಲಿ ಅದರಲ್ಲೂ ಹರಿಜನ-ಗಿರಿಜನರ ವಕ್ಕಳು ಹೆಸರನ್ನು ಮಾತ್ರ ನೋಂದಾಯಿಸುತ್ತಾರೆ, ಮಕ್ಕಳು ಶಾಲೆಗೆ ಬರುವುದಿಲ್ಲ. ಆದ್ದರಿಂದ ಈ ಮಕ್ಕಳು ಕಡ್ಡಾಯವಾಗಿ ಶಾಲೆಗೆ ಬರುವಂತೆ ಏನು ವ್ಯವಸ್ಥೆ ಮಾಡಿದ್ದೀರಿ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ಮಕ್ಕಳು ಶಾಲೆಗೆ ಬರದೇ ಇರಲಿಕ್ಕೆ ನಾನಾ ಕಾರಣಗಳಿವೆ. ಮುಖ್ಯವಾಗಿ ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿ. ಇವೆಲ್ಲವೂ ಅವಲಂಬಿಸಿದೆ. ಇದರಿಂದಾಗಿ ಎಷ್ಟೋ ಮಕ್ಕಳು ಶಾಲೆಗೆ ಸೇರಿದರೂ ಕೂಡ ತಿಂಗಳಲ್ಲಿ ೧೦-೧೫ ದಿವಸ ಬರುವುದಿಲ್ಲ. ಆದುದರಿಂದ ಮಕ್ಕಳು ಶಾಲೆಗೆ ಬರುವ ಹಾಗೆ ಮಾಡಬೇಕು ಎಂದು ಇನ್‌ಸೆಂಟೀವ್ ಸ್ಕೀಮನ್ನು ಹಾಕಿಕೊಂಡಿದ್ದೇವೆ. ಮಿಡ್ ಡೇ ಮೀಲ್ ಪ್ರೋಗ್ರಾಂ ಇದೆ, ಮಧ್ಯಾಹ್ನದ ಉಪಹಾರದ ಯೋಜನೆಯನ್ನು ನಾವು ಹಾಕಿಕೊಂಡಿದ್ದೇವೆ. ಪ್ರತಿವರ್ಷ ಡಿಸೆಂಬರ್‌ನಲ್ಲಿ ನಮ್ಮ ಟೀಚರ್ಸ್ ಸ್ಕೂಲ್ ಇರತಕ್ಕ ಏರಿಯಾನಲ್ಲಿ ಸರ್ವೆ ಮಾಡಿ ಮುಂದಿನವರ್ಷ ಆ ವಯಸ್ಸಿಗೆ ಒಳಪಡತಕ್ಕ ಮಕ್ಕಳ ಅಂಕಿಅಂಶಗಳನ್ನು ತೆಗೆದುಕೊಂಡು ಶಾಲೆಗೆ ದಾಖಲಾತಿ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ.

ಶ್ರೀ ವಿ.ಎಲ್. ಶಿವಪ್ಪ.—ಈಗ ಮಾನ್ಯ ಮಂತ್ರಿಗಳು ಇನ್‌ಸೆಂಟಿವ್ಸ್‌ಗೆ ಹೋದವರ್ಷ ೧೯ ಲಕ್ಷ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆ, ಈಗ ಜಾಸ್ತಿ ಮಾಡಿದ್ದೇವೆ ಎಂದು ಹೇಳಿದರು, ಆ ೧೯ ಲಕ್ಷ ರೂಪಾಯಿಯಲ್ಲಿ ಎಷ್ಟು ಖರ್ಚಾಗಿದೆ ಎನ್ನುವುದನ್ನು ತಿಳಿಸುತ್ತೀರಾ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—೧೯ ಲಕ್ಷ ರೂಪಾಯಿಗಳು ಪೂರ್ಣವಾಗಿ ಖರ್ಚಾಗಿದೆ.

ಶ್ರೀ ಪಿ. ರಾಮದೇವ್.—ತಾವು ಕಡ್ಡಾಯ ಶಿಕ್ಷಣವನ್ನು ತಂದಿದ್ದೀರಿ, ಜಾರಿಗೆ ಕೊಡುತ್ತಾ ಇದ್ದೀರಿ. ಆದರೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರುವಾಗ, ಕಡ್ಡಾಯವಾಗಿ ಎಲ್ಲಾ ಗ್ರಾಮಗಳಲ್ಲೂ ಶಾಲೆಗಳು ಇರಬೇಕು, ಶಾಲೆಗಳು ಇಲ್ಲದೇ ಇರತಕ್ಕ ಸಣ್ಣಪುಟ್ಟ ಗ್ರಾಮಗಳಿಗೆ ಶಾಲೆಗಳನ್ನು ಕೊಡತಕ್ಕ ವ್ಯವಸ್ಥೆ ಏನಾದರೂ ಮಾಡಿದ್ದೀರಾ ?

ಶ್ರೀಮತಿ ನಾಗಮ್ಮ ಕೇಶವಮೂರ್ತಿ.—ಹಿಂದಿನ ವರ್ಷ ನಾವು ಯಾವ ಯಾವ ಗ್ರಾಮಗಳಲ್ಲಿ ೩೦೦ಕ್ಕಿಂತ ಹೆಚ್ಚಿಗೆ ಜನಸಂಖ್ಯೆ ಇದೆ, ಆ ಗ್ರಾಮಗಳ ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ನೋಡಿದಾಗ ೬೪೯ ಗ್ರಾಮಗಳಲ್ಲಿ ೩೦೦ ಜನಸಂಖ್ಯೆ ಇದ್ದರೂ ಸಹ ಶಾಲೆಗಳು ಇಲ್ಲದೇ ಇರತಕ್ಕ ಗ್ರಾಮಗಳು ನಮ್ಮ ರಾಜ್ಯದಲ್ಲಿದ್ದುವು, ಅವೆಲ್ಲಾ ಗ್ರಾಮಗಳಲ್ಲಾ ನಾವು ಟೀಚರ್ಸನ್ನು ಪೋಸ್ಟ್ ಮಾಡಿದ್ದೇವೆ, ಶಾಲೆಗಳನ್ನು ತೆರೆದಿದ್ದೇವೆ.

ಶ್ರೀ ಸಿ. ರುದ್ರಪ್ಪ.—ಅಧ್ಯಕ್ಷರೇ, ಕಡ್ಡಾಯ ಶಿಕ್ಷಣವನ್ನು ೯೪ ಪರ್ಸೆಂಟ್ ಪಡೆದಿದ್ದಾರೆಂದು ಮಾನ್ಯ ಮಂತ್ರಿಯವರು ಹೇಳಿದ್ದಾರೆ. ಅದನ್ನು ಯಾವ ಅಂಕಿಅಂಶಗಳ ಆಧಾರದ ಮೇಲೆ ಹೇಳಿದ್ದಾರೆಂಬುದನ್ನು ಹೇಳುತ್ತಾರೆಯೇ ?

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ನಾನು ಈಗಾಗಲೇ ಇದರ ಬಗ್ಗೆ ಹೇಳಿದ್ದೇನೆ. ಪ್ರತಿ ವರ್ಷ ಡಿಸೆಂಬರ್ ತಿಂಗಳಲ್ಲಿ ನಮ್ಮ ಉಪಾಧ್ಯಾಯರು ತಮ್ಮ ಶಾಲೆ ಇರತಕ್ಕ ಏರಿಯಾದಲ್ಲಿ ಒಂದು ಸರ್ವೆ ಮಾಡಿ ಅಂಕಿಅಂಶಗಳನ್ನು ಸಂಗ್ರಹಣೆ ಮಾಡುತ್ತಾರೆ. ಅಲ್ಲಿರತಕ್ಕ ಮಕ್ಕಳ ಸಂಖ್ಯೆ ಎಷ್ಟು, ಅವರಲ್ಲಿ ಎಷ್ಟು ಜನ ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ, ಎಷ್ಟು ಮಕ್ಕಳು ಹೋಗುತ್ತಿಲ್ಲ ಎನ್ನುವುದನ್ನು ಸಂಗ್ರಹಿಸುತ್ತಾರೆ. ಆ ಒಂದು ಅಂಕಿಅಂಶದ ಆಧಾರದ ಮೇಲೆ ನಾನು ಹೇಳಿದ್ದೇನೆ.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಕೇಳಿದ ಪ್ರಶ್ನೆ ಮಾನ್ಯ ಮಂತ್ರಿಯವರಿಗೆ ಅರ್ಥವಾಗಿಲ್ಲವೆಂದು ಕಾಣುತ್ತದೆ. ಇನ್‌ಸೆಂಟಿವ್ ಏನೋ ಇಟ್ಟಿದ್ದೀರಿ ನಾವು ಯಾರಾದರೂ ಅಲ್ಲಿಗೆ ನೋಡಲು ಹೋದಾಗ ಹಾಜರಾತಿ ಇರುತ್ತದೆ. ಆದರೆ ಮರು ದಿವಸ ಆ ಶಾಲೆಗಳಲ್ಲಿ ಹಾಜರಾತಿಯೇ ಇರುವುದಿಲ್ಲ. ಆದುದರಿಂದ ಹರಿಜನ ಗಿರಿಜನರ ಮನೆಗಳಿಗೆ ಉಪಾಧ್ಯಾಯರುಗಳು ಹೋಗಿ ಬಲವಂತವಾಗಿ ಮಕ್ಕಳನ್ನು ಶಾಲೆಗೆ ಕರೆದುಕೊಂಡು ಬರತಕ್ಕ ವ್ಯವಸ್ಥೆಯನ್ನು ಮಾಡುವ ಬಗ್ಗೆ ಏನಾದರೂ ಡೈರೆಕ್ಷನ್ ನೀಡುತ್ತೀರಾ ?

ಶ್ರೀಮತಿ ನಾಗಮ್ಮ ಸಿ, ಕೇಶವಮೂರ್ತಿ.— ಹಾಜರಾತಿ ವಿಷಯದಲ್ಲಿ ಕೇವಲ ಉಪಾಧ್ಯಾಯರು ಮಾತ್ರ ಜವಾಬ್ದಾರರಲ್ಲ. ಪ್ರತಿಯೊಂದು ಶಾಲೆಗಳಲ್ಲೂ ಬೆಟರ್‌ಮೆಂಟ್ ಕಮಿಟೀಸ್ ಎಂದು ಮಾಡಿದ್ದೇವೆ. ಆ ಶಾಲೆಯ ಸುತ್ತಮುತ್ತಲಿರತಕ್ಕಂಥ ಕೆಲವು ಮುಖ್ಯಸ್ಥರನ್ನು ಆ ಕಮಿಟಿಯಲ್ಲಿ ಸದಸ್ಯರನ್ನಾಗಿ ಮಾಡಿದ್ದೇವೆ. ಆದ್ದರಿಂದ ಈ ಕಾರ್ಯದಲ್ಲಿ ಅವರೂ ಸಹ ಭಾಗಿಯಾಗಬೇಕಾಗಿರುತ್ತದೆ. ಅದಕ್ಕೋಸ್ಕರವಾಗಿಯೇ ಬೆಟರ್‌ಮೆಂಟ್ ಕಮಿಟೀಸ್ ಎಂದು ಮಾಡಿದ್ದೇವೆ.

Construction of Major Irrigation Projects in the State

828 SRI S. M. SHEERANALY CHANDRASEKHAR (Hosanagar).— Will the Minister of State for Major and Medium Irrigation be pleased to state.

(a) whether the Government is aware that in most of the major irrigation projects the dam construction is completed leaving the channel work incomplete ;

(b) whether the Government is aware that in Hemavathy Project are total atchkat is for two lakhs of acre and now it is irrigating only 25,000 acres ;

(c) whether it is a fact that this is common feature in most of the Projects ;

(d) if so, whether it is not a loss to the ex-chequer,

(e) the reasons for the authorities not taking up both the works simultaneously ?

SRI B. B. CHIMMANAKATTI (Minister of State for Major and Medium Irrigation).—

(a) Yes. Both the dam as well as Channel Work in respect of Major Irrigation will be taken up simultaneusly. Since the entire canal work cannot be completed before the danm works are completed, the channel works remain to be done even after the dam is completed.

(b) The total irrigable area under Hemavathy Project is 6,50,000 acres and the potential created to end of June, 1981 is 33,440 acres.

(c) In Major Irrigation Projects the Channel works extend even beyond the date of completion of the dam and reservoir.

(d) It is a loss to the Ex-chequer.

(e) Though the dam as well as the channel works are taken up simultaneously, the works of the dam being in a limited area will require more funds and the channels being scattered over a long distance cannot be tackled at a time. The creation of the potential some times will also be in stages depending on creation of storages.